(2) The measures taken by the Government to provide building to such schools which are being run in rented buildings.

Sri H.G. GOVINDE GOWDA (Minister of State for Education).--

1. (a) The total number of primary schools in Athani Constituency - 126.

   (b) Out of them No. of schools run in own building. -70.
   Rented buildings. 56.

2. Construction under N. R. E. P/R. L. E. G. P. acquisition of rented building are some of the measures being examined by the Government.

Percentage of literacy in Karnataka

117(112) DR. B. M. THIPPESWAMY (Bhramasagara).—Will the Minister for Education be pleased to state :—

(a) The percentage of literacy in Karnataka during 1947-48 and 1984-85.

(b) The percentage of Literacy among Scheduled Caste/Scheduled Tribes during the said period in primary, prematric and post matric Classes ?

SRI M. RAGHUPTHY (Minister for Education).—

Year.	percentage of literacy
1947-48	13.03
1984-85	38.5

1947-48	S. Cs & S.Ts (separate figures not available).	1984-85 S. .C	S. T.
primary	4.5	15.02	7.58
pre-Matric	0.46	2.28	1.45
post-Matric	0.02	1.16	0.70

ಕಡ್ಡಾಯ ಶಿಕ್ಷಣ ಕಾಯಿದೆಯನ್ವಯ ೬ ರಿಂದ ೧೦ ವರ್ಷ ವಯೋಮಿತಿಯ ಮಕ್ಕಳ ಗಣತಿಯ ಬಗ್ಗೆ

೧೧೮(೧೧೩) ಡಾ|| ಬಿ. ಎಂ. ತಿಪ್ಪೇಸ್ವಾಮಿ (ಭರಮಸಾಗರ).—ಈ ಕೆಳ ಕಂಡ ಪ್ರಶ್ನೆಗಳಿಗೆ ಪಾಸ್ಯ ಪ್ರಾಧಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯಸಚಿವರು ದಯವಿಟ್ಟು ಉತ್ತರಿಸುವರೇ:—

ಅ) ಕಳೆದ ಮೂರು ವರ್ಷಗಳು ಅಂದರೆ ೧೯೮೨ ೧೯೮೩ ಮತ್ತು ೧೯೮೪ ರಲ್ಲಿ ಗಣತಿಗೆ ಒಳ ಪಟ್ಟಿದ್ದ ೬ ರಿಂದ ೧೦ ವರ್ಷ ವಯಸ್ಸಿನ ಮಕ್ಕಳ ಸಂಖ್ಯೆ ಎಷ್ಟು, ಅವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರ ಸಂಖ್ಯೆ ಎಷ್ಟು ?

ಅ) ಅವರಲ್ಲಿ ಶಾಲೆಗೆ ದಾಖಲಾತಿ ಹೊಂದಿದವರ ಸಂಖ್ಯೆ ?

ಇ) ಈ ಅವಧಿಯಲ್ಲಿ ಶಾಲೆಯನ್ನು ಬಿಟ್ಟವರ ಸಂಖ್ಯೆ, ಅವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರ ವರ್ಗಗಳಿಗೆ ಸೇರಿದವರ ಸಂಖ್ಯೆ ?

ಈ) ಶಾಲೆಯನ್ನು ಬಿಡಲು ಕಾರಣ ?

ಉ) ಶಾಲೆಗಳನ್ನು ಬಿಡದಿರಲು ಒದಗಿಸುವ ಪ್ರೋತ್ಸಾಹಗಳು ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—(ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ)	ವರ್ಷ	ಗಣತಿಗೊಳಪಟ್ಟವರ ಸಂಖ್ಯೆ	ಗಣತಿಗೆ ಒಳಪಟ್ಟ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು.
	೧೯೮೨	೩೩,೫೦,೦೦೯	೬,೦೬,೪೮೪
	೧೯೮೩	೩೪,೧೬,೮೨೬	೬,೩೮,೧೦೬
	೧೯೮೪	೩೪,೭೨,೯೨೨	೬,೪೮,೪೭೮
ಆ)	೧೯೮೨	೩೨,೧೯,೧೨೪	೫,೭೨,೦೨೩
	೧೯೮೩	೩೨,೭೪,೦೮೭	೫,೯೩,೬೭೭
	೧೯೮೪	೩೨,೭೭,೨೫೭	೫,೯೩,೯೩೬

ಇ) ಈ ಮಾಹಿತಿ ಸಿಗುವುದಿಲ್ಲವಾದ್ದರಿಂದ ಸಂಗ್ರಹಿಸಲಾಗಿಲ್ಲ.

ಈ) ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪೋಷಕರ ಆರ್ಥಿಕ ಪರಿಸ್ಥಿತಿಯು ಈ ಶಾಲೆಗಳನ್ನು ಬಿಡುವುದಕ್ಕೆ ಮುಖ್ಯ ಕಾರಣ.

ಉ) ಶಾಲೆಯನ್ನು ಬಿಡದಿರಲು ಉಚಿತ ಪುಸ್ತಕಗಳ ವಿತರಣೆ, ಹೆಣ್ಣುಮಕ್ಕಳಿಗೆ ಉಚಿತ ಸಮವಸ್ತ್ರ ಹಾಗೂ ವಿದ್ಯಾರ್ಥಿವೇತನ ಯೋಜನೆಯು ಜಾರಿಯಲ್ಲಿದೆ. (ಉಚಿತ ಸಮವಸ್ತ್ರವನ್ನು ೧ ಮತ್ತು ೨ನೇ ತರಗತಿಯ ಮಕ್ಕಳಿಗೆ ಹಾಗೂ ೩ ರಿಂದ ೭ನೇ ತರಗತಿಯಲ್ಲಿನ ಪರಿಶಿಷ್ಟ ಜಾತಿ/ಪಂಗಡಗಳ ಹೆಣ್ಣು ಮಕ್ಕಳಿಗೆ ನೀಡಲಾಗುತ್ತದೆ.

ಗಮನ ಸೆಳೆಯುವ ಸೂಚನೆ

೧. ಉಡುಪಿ ತಾಲ್ಲೂಕು ಕೋಟ ಆರಕ್ಷಕ ಠಾಣೆಯ ಸಬ್ ಇನ್ಸ್‌ಪೆಕ್ಟರ್ ವರ್ಗಾವಣೆ ಬಗ್ಗೆ

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ೨೨ ಲಕ್ಷ ರೂಪಾಯಿ ಮೌಲ್ಯದ ಕಳ್ಳ ಸಾಗಾಣಿಕೆ ಸರಕುಗಳನ್ನು ಹಿಡಿದ ನಂತರ ಉಡುಪಿ ತಾಲ್ಲೂಕಿನ ಕೋಟ ಆರಕ್ಷಕ ಠಾಣೆಯ ಆರಕ್ಷಕ ಉಪ ನಿರೀಕ್ಷಕರನ್ನು ಏಕಾಏಕಿ ವರ್ಗಾವಣೆ ಮಾಡಿದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀ ಅಲ್ಲಮಪ್ರಭು ಸುಬೇದಾರ್‌ರವರು ೮.೯.೮೫ರಿಂದ ದಕ್ಷಿಣ ಕನ್ನಡ ಜಿಲ್ಲೆಯ ಕೋಟಾ ಆರಕ್ಷಕ ಠಾಣೆಯಲ್ಲಿ ಸಬ್ ಇನ್ಸ್‌ಪೆಕ್ಟರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ೮.೯.೮೫ರಂದು ಅವರನ್ನು ಪಶ್ಚಿಮ ವಲಯದ ಬೇರೆ ಯಾವುದಾದರೂ ಒಂದು ಆರಕ್ಷಕ ಠಾಣೆಗೆ ವರ್ಗಾಯಿಸಬೇಕೆಂದು ಪಶ್ಚಿಮ ವಲಯದ ಡಿ.ಐ.ಜಿ. ಯವರಿಗೆ ಆದೇಶ ನೀಡಲಾಯಿತು. ವರ್ಗಾವಣೆ ಮೇಲೆ ಶ್ರೀ ಅಲ್ಲಮಪ್ರಭು ಸುಬೇದಾರ್‌ರವರು ೧೦.೯.೮೫ರಂದು ಉತ್ತರ ಕನ್ನಡ ಜಿಲ್ಲೆಗೆ ಹೋಗಿ ಅಲ್ಲಿಯ ಜಿಲ್ಲಾ ಪೋಲೀಸ್ ಅಧಿಕಾರಿಗಳ ಮುಂದೆ ಹಾಜರಾದರು. ಅಲ್ಲಿಯ ಜಿಲ್ಲಾ ಪೋಲೀಸ್ ಅಧಿಕಾರಿಗಳು ಅವರನ್ನು ಉತ್ತರ ಕನ್ನಡ ಜಿಲ್ಲೆಯ ಚಿತ್ತಕುಲ ಆರಕ್ಷಕ ಠಾಣೆಯ ಸಬ್‌ಇನ್ಸ್‌ಪೆಕ್ಟರಾಗಿ ನೇಮಿಸಿದರು. ಅವರು ಆಗಿನಿಂದಲೂ ಅಲ್ಲಿಯೇ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ.